**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್ ಡಿ ಕೋಟೆ**

**ಸಿ.ಸಿ ನಂ.263/2018**

**ಸಿ.ಡಬ್ಲ್ಯೂ- 11 ಪಿ.ಡಬ್ಲ್ಯೂ- 9**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಶುಭಾ |
| ತಂದೆಯ ಹೆಸರು | : | ರಂಗಪ್ರಸಾದ್ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ |
| ವಾಸ ಸ್ಥಳ | : | ಬೆಂಗಳೂರು |

**ದಿನಾಂಕ 07.03.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2013 ಜೂನ್ ನಿಂದ 2017 ಜುಲೈ ರವರೆಗೆ ಹೆಚ್.ಡಿ. ಕೋಟೆ ಯಲ್ಲಿ ವೈದ್ಯಾಧಿಕಾರಿಯಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 20.03.2017 ರಂದು ಮದ್ಯಾಹ್ನ 1 ಗಂಟೆಗೆ ಚಾಸಾ 3 ರವರು ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿರುತ್ತಾರೆ. ಅವರನ್ನು ಪರೀಕ್ಷಿಸಲಾಗಿ ಅವರಿಗೆ ಎಡ ಬುಜದ ಮೇಲೆ ಊತ ಮತ್ತು ಬಲ ತೋಳಿನ ಮುಂಗೈ ತರಚಿದ ಗಾಯ ಮತ್ತು ಊದಿದ ಗಾಯ ಕಂಡುಬಂದಿರುತ್ತದೆ. Fracture Injuri ಆಗಿರಬಹುದು ಎಂದು ಸದರಿಯವರನ್ನು ಕೆ ಆರ್ ಆಸ್ಪತ್ರೆ ಮೈಸೂರಿಗೆ ಕಳುಹಿಸಿಕೊಟ್ಟಿರುತ್ತೇನೆ.

ಆದರೆ ಯಾವುದೇ ಫ್ರಾಕ್ಚರ್ ಇಂಜುರಿ ಆಗಿರುವುದಿಲ್ಲ. ಮೆಲ್ಕಂಡ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿರುತ್ತದೆ.

ಅದೇ ದಿನ ಚಾಸಾ 1 ರವರು ಮದ್ಯಾಹ್ನ 1.15 ರಲ್ಲಿ ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿರುತ್ತಾರೆ. ಲಾಟಿ ಮತ್ತು ಕುಡುಗೊಲಿನಿಂದ ಆರೋಪಿ 1 ರವರು ಮತ್ತು ಇನ್ನೀತರರು ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ಅವರನ್ನು ಪರೀಕ್ಷಿಸಲಾಗಿ ಎಡ ತಲೆಯ ಮೇಲ್ಬಾಗ ಹರಿದ ಗಾಯ 2*6 ಸೆಂಟಿ ಮೀಟರ್ ಆಗಿದ್ದು ಮೇಲ್ಕಂಡ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿರುತ್ತದೆ.

ಅದೇ ದಿನ ಮದ್ಯಾಹ್ನ 1.20 ರ ಸಮಯದಲ್ಲಿ ಚಾಸಾ 2 ರವರು ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ ಅವರಿಗೆ ಬೆನ್ನಿನ ಎಡ ಭಾಗದಲ್ಲಿ ನೋವು ಎಂದು ಹೇಳಿರುತ್ತಾರೆ. ಮೇಲ್ಕಂಡ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿರುತ್ತದೆ. ಸಾಕ್ಷಿ ಗಾಯ ಪ್ರಮಾಣ ಪತ್ರದಲ್ಲಿ ರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಗಾಯದ ಪ್ರಮಾಣ ಪತ್ರಗಳನ್ನು ಕ್ರಮವಾಗಿ ನಿಪಿ 5 ರಿಂದ 7 ಎಂದು ಸಾಕ್ಷಿಯ ಸಹಿಯನ್ನು ನಿಪಿ **5 (ಎ) ರಿಂದ 7 (ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಿಪಿ 5 ರಿಂದ 7 ರಲ್ಲಿ ಗಾಯದ ಅವಧಿಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ಆರೋಪಿ 1 ಮತ್ತು 5 ರವರ ಹೆಸರನ್ನು ನಿಖರವಾಗಿ ಹೇಳಿರುತ್ತಾರೆ. ಸಾಮಾನ್ಯವಾಗಿ ಎತ್ತಿನ ಗಾಡಿಯಿಂದ ಬಿದ್ದಾಗ ನಿಪಿ 5 ರಿಂದ 7 ರಲ್ಲಿ ನಮೂದಿಸಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಚಾಸಾ 3 ರವರು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**